# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 09/2020-21 ದಿನಾಂಕ: 06.02.2021

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-06.02.2021 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ರಮೇಶ್ | ಜೆ.ಇ ಹೊರಮಾವು ವಾರ್ಡ-25 | 9739838297 |
| 3 | ಶ್ರೀ.ಚಂದ್ರಶೇಖರ್.ಎ.ಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು) | 9844587466 |
| 4 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | 9742919411 |
| 5 | ಶ್ರೀ.ಹರೀಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | 8431325214 |
| 6 | ಶ್ರೀ.ಸತೀಶ್‌ಕುಮಾರ್.ಸಿ.ಆರ್ | AE (SWD) BBMP | |
| 7 | ಶ್ರೀ.ತಿರುಮಲ ಪ್ರಸಾದ್ | BWSSB (PMC) | |
| 8 | ಶ್ರೀ. ಆನಂದ್ | AEE (BWSSB) | |
| 9 | ಶ್ರೀ.ಚಂದನ್.ಎಸ್ | AE (BWSSB) | |
| 10 | ಶ್ರೀ.ಆರ್ಮುಗಂ, ದಾಮೋದರನ್ ಮತ್ತು ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - | - |
| 11 | ಶ್ರೀ.ಡೇವಿಡ್, ಶ್ರೀ.ಗೋವಿಂದ ಸ್ವಾಮಿ, ಶ್ರೀ.ಐಸಾಕ್, ಶ್ರೀ.ಮಾರ್ಟೀನ್ ಸಾಯಿ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ | - | - |
| 12 | ಶ್ರೀಮತಿ.ನಾಗಜ್ಯೋತಿ.ಕೆ.ಎಸ್, ರಾಮಮೂರ್ತಿನಗರ, | - | - |
| 13 | ಶ್ರೀಮತಿ.ಸಿಂಧು, ಕನಕಗಿರಿ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ ಹಾಗೂ ಶ್ರೀ.ನವೀನ್ & ಶ್ರೀ.ಪದೀಪ್ ಎಸ್.ಎಲ್.ವಿ ಬಡಾವಣೆ:- | - | - |
| 14 | ಶ್ರೀಮತಿ.ಸುಭಾಷಿಣಿ, ಫರ್ನ್ಸ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ | - | - |
| 15 | ಶ್ರೀಮತಿ.ಸುಭಾಷಿಣಿ ಮೆನನ್ ಫರ್ನ್ಸ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ | - | - |
| 16 | ಶ್ರೀ.ಆನಂದ್, ಹೊರಮಾವು ಅಗರ ಗ್ರಾಮ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ :- | | |

ಪು.ತಿ.ನೋ

Scanned with CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ಶ್ರೀ.ಆರ್ಮುಗಂ, ದಾಮೋದರನ್ ಮತ್ತು ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಸರ್.ಎಂ.ವಿ ನಗರ 17ನೇ ಅಡ್ಡರಸ್ತೆಗಳಲ್ಲಿ ರಸ್ತೆ ಸಮತಟ್ಟು ಮಾಡಲು ಹಾಗೂ ಬೀದಿನಾಯಿಗಳು ಹೆಚ್ಚುತ್ತಿದ್ದು, ಸಣ್ಣ ಮಕ್ಕಳು ಮತ್ತು ಸಾರ್ವಜನಿಕರನ್ನು ಕಚ್ಚುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಕೋರಿರುತ್ತಾರೆ.
ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-25 ರವರು ರಸ್ತೆಯ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಶ್ರೀ.ಡೇವಿಡ್, ಶ್ರೀ.ಗೋವಿಂದ ಸ್ವಾಮಿ, ಶ್ರೀ.ಐಸಾಕ್, ಶ್ರೀ.ಮಾರ್ಟಿನ್ ಸಾಯಿ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಸಾಯಿಬಾಬ ಬಡಾವಣೆಯಲ್ಲಿ ಮಳೆಗಾಲದಲ್ಲಿ ನೀರು ಅಲ್ಲಲ್ಲಿ ನಿಲ್ಲುತ್ತಿದ್ದು, ಬಿ.ಡಿ.ಎ ಮತ್ತು ರಾಜಕಾಲುವೆ ವಿಭಾಗದವರು ಇದುವರೆವಿಗೂ ಯಾವುದೇ ಕ್ರಮವನ್ನು ವಹಿಸಿರುವುದಿಲ್ಲವೆಂದು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಹಾಗೂ ಬಿ.ಡಿ.ಎ ರವರು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಶ್ರೀಮತಿ.ನಾಗಜ್ಯೋತಿ.ಕೆ.ಎಸ್, ರಾಮಮೂರ್ತಿನಗರ, :- ರವರು ಮಾತನಾಡಿ ಹೊಯ್ಸಳನಗರದಲ್ಲಿ ಕೆಲವು ರಸ್ತೆಗಳಲ್ಲಿ ಹೊಸದಾಗಿ ಕೊಳವೆಬಾವಿ ಕೊರೆದು ಕುಡಿಯುವ ನೀರು ಪೈಪ್‌ಲೈನ್ ಅಳವಡಿಸಿ ನೀರು ಸರಬರಾಜು ಮಾಡಲು ಮತ್ತು ರಸ್ತೆಗಳ ಸ್ವಚ್ಛತೆ ಬಗ್ಗೆ ಗಮನ ಹರಿಸಲು ಮತ್ತು ಡಿ-ಮಾರ್ಟ್ ಬಳಿ ಸದರಿ ಮಾರ್ಟ್‌ಗೆ ಬರುವ ಸಾರ್ವಜನಿಕರು ಬಡಾವಣೆಯ ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಮತ್ತು ಮಾರ್ಟ್ ಮಾಲಿಕರು ಮಾರ್ಟ್‌ನ ಅನುಪಯುಕ್ತ ಕಸವನ್ನು ಇಲ್ಲಿನ ಖಾಲಿ ನಿವೇಶನ ಮತ್ತು ರಸ್ತೆಗಳಲ್ಲಿ ಹಾಕುತ್ತಿದ್ದು, ಇದರಿಂದ ಬಡಾವಣೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಮತ್ತು ಬಡಾವಣೆಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಇದರಿಂದ ಮಕ್ಕಳು, ವೃದ್ದರಿಗೆ ತೊಂದರೆಯುಂಟಾಗುತ್ತಿರುವುದಾಗಿ ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ಉಪ-ವಿಭಾಗ ಹಾಗೂ ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ.ಸಿಂಧು, ಕನಕಗಿರಿ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ ಹಾಗೂ ಶ್ರೀ.ನವೀನ್ & ಶ್ರೀ.ಪ್ರದೀಪ್ ಎಸ್.ಎಲ್.ವಿ ಬಡಾವಣೆ:- ರವರು ಮಾತನಾಡಿ ಎಸ್.ಎಲ್.ವಿ ಬಡಾವಣೆಯಲ್ಲಿ ಕೆಲವು ಕಡೆ ರಸ್ತೆ ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. ಮತ್ತು ಶೂಟಿಂಗ್ ಬಿಲ್ಡಿಂಗ್ ಹತ್ತಿರ ಹೊಸದಾಗಿ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-25 ರವರು ರಸ್ತೆಯ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಶ್ರೀಮತಿ.ಸುಭಾಷಿಣಿ ಮೆನನ್ ಫರ್ನ್ಸ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ – ರವರು ಮಾತನಾಡಿ ನವ ಜ್ಯೋತಿ ರಸ್ತೆ(ಪರ್ನ್ಸ್ ರಸ್ತೆ) ಡಾಂಬರೀಕರಣ ಕಾಮಗಾರಿಯನ್ನು ಪ್ರಾರಂಭಿಸದಿರುವ ಬಗ್ಗೆ ಕೋರಿಕೊಂಡಿದ್ದು, ಈ ಕುರಿತು ಸಹಾಯಕ ಅಭಿಯಂತರರು ಮಾತನಾಡಿ ಬೆಸ್ಕಾಂ ಇಲಾಖೆಯವರು ಓವರ್‌ಹೆಡ್ ಕೇಬಲ್‌ನ್ನು ಅಳವಡಿಸುತ್ತಿದ್ದು, ಈ ಕೇಬಲ್ ಅಳವಡಿಸಿದ ನಂತರ ಡಾಂಬರೀಕರಣ ಮಾಡುವುದಾಗಿ ತಿಳಿಸಿದ್ದು, ಬೆಸ್ಕಾಂ ಸಹಾಯಕ ಅಭಿಯಂತರರು ಮಾತನಾಡಿ 15 ದಿನಗಳ ಒಳಗಾಗಿ ಓವರ್‌ಹೆಡ್ ಕೇಬಲ್ ಅಳವಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಿಕೊಡುವುದಾಗಿ, ತದನಂತರ ಡಾಂಬರೀಕರಣ ಕಾಮಗಾರಿಯನ್ನು ಮಾಡಿಕೊಳ್ಳಬಹುದಾಗಿ ತಿಳಿಸಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.



Scanned with CamScanner

**<u>ಶ್ರೀ.ಆನಂದ್, ಹೊರಮಾವು ಅಗರ ಗ್ರಾಮ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್</u> :-** ರವರು ಮಾತನಾಡಿ ಕನಕಗಿರಿ ಶೂಟಿಂಗ್ ಬಿಲ್ಡಿಂಗ್ ಬಳಿ ಅಡ್ಡರಸ್ತೆಗಳು ಹಾಗೂ ಹೊರಮಾವು ಅಗರ/ಕಲ್ಕೆರೆ/ಬಂಜಾರ ಬಡಾವಣೆ ಮುಖ್ಯರಸ್ತೆ ಮತ್ತು ಬಂಜಾರ ಬಡಾವಣೆ ಆರ್ಚ್ ಮುಖ್ಯರಸ್ತೆಯಲ್ಲಿ ಈಗಾಗಲೇ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕೊಳವೆ ಸಾಲುಗಳನ್ನು ಅಳವಡಿಸಿದ್ದು, ಸದರಿ ರಸ್ತೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಮಾಡಿ ಡಾಂಬರೀಕರಣ ಮಾಡಲು ಕೋರಿಕೊಂಡಿರುತ್ತಾರೆ.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

06/02/2021
ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ನಂ.25
ಬಿ.ಬಿ.ಎಂ.ಪಿ

Scanned with CamScanner